ಬಂದಾಗ ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸೂಕ್ತವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಂಡು ಟಾಸ್ಕ್‌ಫೋರ್ಸ್ ಮುಖಾಂತರ ಕಾರ್ಯ ನಿರ್ವಹಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಹಾಗೂ ಆ ಪ್ರಕಾರ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಕೆ. ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೆ, ಸಮಸ್ಯೆ ಆದ ಕಡೆಗಳಲ್ಲಿ ಏನು ಮಾಡಬೇಕು ಎಂದು ಹೇಳಿದ್ದಾರೆ ಅದು ಸರಿಯಾಗಿದೆ. ಆದರೆ ಇನ್ನೂ ಕೂಡ ಎಲ್ಲೆಲ್ಲಿ ನೀರಿನ ವ್ಯವಸ್ಥೆ ಆಗಿಲ್ಲವೋ ಅಲ್ಲಿ ಅದಕ್ಕೆ ಈಗಾಗಲೇ ಕೆಲವು ಗ್ರಾಮ ಪಂಚಾಯತಿಗಳಿಂದ ಪ್ರಸ್ತಾವನೆಗಳು ಹೋಗಿವೆ. ಆದರೆ ಜಿಲ್ಲಾ ಪಂಚಾಯತಿಯಲ್ಲಿ ಈಗ ಈ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮುಂದೆ ಸ್ವಜಲಧಾರ ಯೋಜನೆ ಬರುತ್ತದೆಯಲ್ಲ ಆಗ ಈ ಯೋಜನೆಯ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಸ್ವಜಲಧಾರ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಬರುವ ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುತ್ತದೆಯೆ? ಬರುವುದಿದ್ದರೆ ಎಷ್ಟು ಹಣವನ್ನು ಆ ಯೋಜನೆ ಮೂಲಕ ಬರುತ್ತದೆ ಎಂಬ ಬಗ್ಗೆ ಕೂಡ ಸಚಿವರು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕಳುಹಿಸಿದರೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

164 (2091) **ಶ್ರೀ ಹಾಲಪ್ಪ ಹೆಚ್ (ಹೊಸನಗರ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಹೊಸನಗರ ತಾಲ್ಲೂಕಿನಲ್ಲಿ ಯಾವುದೇ ಖಾಸಗಿ ಮತ್ತು ಸರ್ಕಾರಿ ಪದವಿಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಿಂದಿನ ಅಧಿವೇಶನದಲ್ಲಿ ಸರ್ಕಾರವು ನೀಡಿದ ಆಶ್ವಾಸನೆ ಯಾವ ಹಂತದಲ್ಲಿದೆ ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ. ಇ) ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ನಿಷೇಧ ಜಾರಿಯಲ್ಲಿರುವುದರಿಂದ ಈಗಾಗಲೆ ನೀಡಿದ ಆಶ್ವಾಸನೆಯನ್ನು ಈಡೇರಿಸಲಾಗಿರುವುದಿಲ್ಲ. ಸದರಿ ನಿಷೇಧ ಸಡಿಲಿಸಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕಳುಹಿಸಿದ್ದಾರೆ. ಈ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲೂ ಕೂಡ ಪ್ರಶ್ನೆ ಮಾಡಿದ್ದೆ. ಆಗ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಅಲ್ಲಿ ಉಪನ್ಯಾಸಕರ ಕೊರತೆಯಿಂದಾಗಿ ಮುಚ್ಚಿದ್ದಾರೆ ಎಂದು ಹೇಳಿದ್ದಾರೆ. ಉಪನ್ಯಾಸಕರ ಕೊರತೆ, ಮಾಸ್ತರುಗಳ ಕೊರತೆ ಇದೆ ಎಂದು ಹೇಳಿ ಶಾಲೆಗಳನ್ನು ಮುಚ್ಚಿಬಿಟ್ಟರೆ ಅಲ್ಲಿ ವಿದ್ಯಾರ್ಥಿಗಳಿಗೆ ಶಾಲೆಗಳು ನಡೆಯುವುದಾದರೂ ಹೇಗೆ ಹೇಳಿ. ಆದುದರಿಂದ ಈ ಬಗ್ಗೆ ತಕ್ಷಣ ತಾವು ಕ್ರಮ ತೆಗೆದುಕೊಳ್ಳಬೇಕು. ಇನ್ನು ಉತ್ತರದಲ್ಲಿ ಮಿತವ್ಯಯದ ಕಾರಣವನ್ನು ಹೇಳಿದ್ದಾರೆ. ಅದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಮಿತವ್ಯಯ ಕಾರಣವನ್ನು ಶಿಕ್ಷಣ ಇಲಾಖೆಗೆ ಅನ್ವಯಿಸುವುದಿಲ್ಲವೆಂದು ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡುವಾಗ ಈಗ ತಾನೇ ಹೇಳಿದ್ದಾರೆ. ಆದುದರಿಂದ ಆ ಹಿನ್ನೆಲೆಯಲ್ಲಿ ಬೇಗ ತಾವು ಕ್ರಮ ತೆಗೆದುಕೊಂಡು ನಮ್ಮ ಇಡೀ ತಾಲ್ಲೂಕಿನಲ್ಲಿ ಸೈನ್ಸ್ ಸೆಕ್ಷನ್ ಇಲ್ಲ, ಇಲ್ಲಿ 27 ಹೈಸ್ಕೂಲ್‌ಗಳು ಇವೆ. ಆದುದರಿಂದ ತಾವು ಬೇಗ ಕೂಡಲೇ ಕ್ರಮ ತೆಗೆದುಕೊಂಡು ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ಈ ವರ್ಷಕ್ಕೆ ಅಂದರೆ ಬರತಕ್ಕಂಥ ಮುಂದಿನ ವರ್ಷಕ್ಕೆ ಸೈನ್ಸ್ ಸೆಕ್ಷನ್‌ನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಒಂದು ಪಿ.ಯು. ಕಾಲೇಜ್ ಇದೆ. ಆ ಪಿ.ಯು. ಕಾಲೇಜಿನಲ್ಲಿ ಸೈನ್ಸ್ ಸೆಕ್ಷನ್ ಇಲ್ಲ. ಆಮೇಲೆ ನಾವು ಫಸ್ಟ್ ಗ್ರೇಡ್ ಕಾಲೇಜಿಗೆ ನಾವು ಸೈನ್ಸ್ ಸೆಕ್ಷನ್ ಕೊಡುವುದಕ್ಕೆ ತಯಾರಿದ್ದೇವೆ. ಅದರೆ ಅಲ್ಲಿ ಫೀಡಿಂಗ್ ಬರಬೇಕಲ್ಲ, ಹೆಚ್ಚು ಸ್ಟೂಡೆಂಟ್ಸ್ ಬರಬೇಕಲ್ಲ, ಮಾನ್ಯ ಅಧ್ಯಕ್ಷರೆ, ನಾನು ಅವರ ಹತ್ತಿರ ಈಗಾಗಲೇ

ಮಾತನಾಡಿದ್ದೇನೆ. ಈ ವರ್ಷ ನಾನೂ ಹೇಳುತ್ತೇನೆ ಅವರಿಗೆ, ಸಂಬಂಧಪಟ್ಟ ಮಂತ್ರಿಗಳಿಗೂ ಹೇಳುತ್ತೇನೆ, ಅಧಿಕಾರಿಗಳಿಗೂ ಹೇಳಿ ನಿಮ್ಮ ಕಡೆ ಪಿ.ಯು. ಕಾಲೇಜಿಗೆ ಸೈನ್ಸ್ ಸೆಬ್ಜೆಕ್ಟ್‌ನ್ನು ಕೊಡಿಸೋಣ. ಇದಾದ ಮೇಲೆ ನಾವು ಎರಡು ವರ್ಷವಾದ ಮೇಲೆ ಫಸ್ಟ್ ಗ್ರೇಡ್ ಕಾಲೇಜಿಗೆ ಸೈನ್ಸ್ ಕೊಡುತ್ತೇವೆ.

165 (2354) **ಶ್ರೀ ಬಸವರಾಜ ರಾಯರೆಡ್ಡಿ** (ಯಲಬುರ್ಗ) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ರಾಜ್ಯದಲ್ಲಿಯ ಜಿಲ್ಲಾ ತಾಲ್ಲೂಕು ಆಸ್ಪತ್ರೆಯ ಪ್ರಾಥಮಿಕ ಆರೋಗ್ಯ ಕೇಂದ್ರವು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸರ್ಕಾರದ ವತಿಯಿಂದ ಔಷಧಿಗಳನ್ನು ಖರೀದಿ ಮಾಡಲಾಗುತ್ತಿರುವುದು ನಿಜವಲ್ಲವೇ.

ಆ) ಯಾವ ಯಾವ ಪ್ರಮಾಣದಲ್ಲಿ ಈ ಆಸ್ಪತ್ರೆಗಳಿಗೆ ಪ್ರತಿ ವರ್ಷ ಔಷಧಿಗಳನ್ನು ಖರೀದಿ ಮಾಡಲಾಗುತ್ತಿದೆ (ಜಿಲ್ಲಾವಾರು ವಿವರಣೆ ನೀಡುವುದು)

ಇ) ಸದರಿ ಔಷಧಿಗಳನ್ನು ಖರೀದಿಯಲ್ಲಿ ಆಳವಡಿಸಿರುವ ಮಾನದಂಡಗಳೇನು ಹಾಗೆ ಯಾರಿಂದ ಖರೀದಿಸಲಾಗುತ್ತಿದೆ.

ಈ) ಖರೀದಿಸಿದ ಔಷಧಿಗಳು ಗುಣಮಟ್ಟವಿಲ್ಲದ ಔಷಧಿಗಳೆಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ) ಹಾಗಿದ್ದಲ್ಲಿ ಇಂತಹ ಗುಣಮಟ್ಟವಿಲ್ಲದ ಔಷಧಿಗಳನ್ನು ಖರೀದಿಸುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಊ) ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಸರ್ಕಾರವೇ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾಗ್ಯೂ ಎಲ್ಲಾ ಆಸ್ಪತ್ರೆಗಳಲ್ಲಿಯೂ ರೋಗಿಗಳಿಂದ ಹಣ ಪಡೆದು ಚಿಕಿತ್ಸೆ ನೀಡುತ್ತಿರುವುದು ಅಲ್ಲವೇ, ಔಷಧಿಗಳನ್ನು ರೋಗಿಗಳಿಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಋ) ಇಂತಹ ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು